# ಎನ್‌ಇಟಿ, ಕೆಎಸ್‌ಇಟಿ ಮಾಹಿತಿ, ತರಬೇತಿ

**ವಿಕ ಸುದ್ದಿಲೋಕ** ಕಾರ್ಕಳ

ಕಾರ್ಕಳದ ಮಂಜುನಾಥ ಪೈ ಸ್ಮಾರಕ ಸರಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಐಕ್ಯುಎಸಿ, ಪಿ.ಜಿ. ಸ್ಟಡೀಸ್ ಸೆಂಟರ್, ಕ್ಯಾರಿಯಲ್ ಮತ್ತು ಕೌನ್ಸೆಲಿಂಗ್ ಸೆಲ್ ಮತ್ತು ಪ್ಲೇಸ್‌ಮೆಂಟ್ ಸೆಲ್‌ಗಳ ಸಂಯುಕ್ತ ಆಶ್ರಯದಲ್ಲಿ ಎನ್‌ಇಟಿ, ಕೆಎಸ್‌ಇಟಿ ಪರೀಕ್ಷೆಗಳ ಕುರಿತು ಮಾಹಿತಿ ಮತ್ತು ತರಬೇತಿ ಭಾನುವಾರ ಮತ್ತು ಸೋಮವಾರ ನಡೆಯಿತು.

ಶ್ರೀ ಭುವನೇಂದ್ರ ಕಾಲೇಜಿನ ವಿಶ್ರಾಂತ ಪ್ರಾಂಶುಪಾಲ ಪ್ರೊ. ಎಸ್. ಗೋವಿಂದ ಪ್ರಭು ಉದ್ಘಾಟಿಸಿ, ಅಧ್ಯಾಪಕ ವೃತ್ತಿಯ ಹಿರಿಮೆಯನ್ನು ಎತ್ತಿ ಹಿಡಿದು, ಈ ತರಬೇತಿಯ ಸಂಪೂರ್ಣ ಸದ್ಬಳಕೆ ಮಾಡಿಕೊಂಡು ಅಧ್ಯಾಪಕ ವೃತ್ತಿ ಕೈಗೊಂಡು ಮಕ್ಕಳ ಉತ್ತಮ ಭವಿಷ್ಯಕ್ಕಾಗಿ ಶ್ರಮಿಸುವ ಪವಿತ್ರ ಕಾರ್ಯದಲ್ಲಿ ಭಾಗಿಗಳಾಗುವಂತಾಗಲಿ ಎಂದರು. ಪ್ರಾಂಶುಪಾಲ ಪ್ರೊ. ಶ್ರೀವರ್ಮ ಅಜ್ರಿ ಎಂ. ಅಧ್ಯಕ್ಷತೆ ವಹಿಸಿದ್ದರು. ಸಂಪನ್ಮೂಲ ವ್ಯಕ್ತಿಗಳಾಗಿ ಕೋಟ ಪಡುಕೆರೆಯ ಸರಕಾರಿ ಪ್ರಥಮ ದರ್ಜೆ ಕಾಲೇಜಿನ ಸಹಾಯಕ ಪ್ರಾಧ್ಯಾಪಕ ಪ್ರೊ. ಮನೋಹರ್ ಉಪ್ಪುಂದ, ಪ್ರೊ. ಪ್ರಶಾಂತ್ ನೀಲಾವರ, ಹಳೆಯಂಗಡಿ ಸರಕಾರಿ ಪ್ರಥಮ ದರ್ಜೆ ಕಾಲೇಜಿನ ಸಹಾಯಕ ಪ್ರಾಧ್ಯಾಪಕ ಪ್ರೊ. ಅಬ್ದುಲ್ ರಜಾಕ್, ಹೆಬ್ರಿ ಸರಕಾರಿ ಪ್ರಥಮ ದರ್ಜೆ ಕಾಲೇಜಿನ ಸಹಾಯಕ ಪ್ರಾಧ್ಯಾಪಕ ಪ್ರೊ. ಪ್ರದೀಪ್ ಆನಂದ್ ಶೆಟ್ಟಿ ಮತ್ತು ಹಿರಿಯಡ್ಕದ ಪ್ರೊ. ಪ್ರತಾಪಚಂದ್ರತರಬೇತಿ ನೀಡಿದರು.



ಎರಡು ದಿನಗಳ ಈ ತರಬೇತಿಯಲ್ಲಿ ಕಾಲೇಜಿನ ಪೂರ್ವ ವಿದ್ಯಾರ್ಥಿಗಳು ಹಾಗೂ ಇತರ ಕಾಲೇಜಿನ ಉಪನ್ಯಾಸಕರ ಸಹಿತ ಸುಮಾರು 70 ಮಂದಿ ಪಾಲ್ಗೊಂಡಿದ್ದರು. ಕಾಲೇಜಿನ ಉಪನ್ಯಾಸಕರಾದ ಯೋಗೇಶ್ ಡಿ. ಎಚ್., ಕೃಷ್ಣಮೂರ್ತಿ ವೈದ್ಯ, ಗಣೇಶ್, ನವೀನ್, ಕಚೇರಿ ಸಿಬ್ಬಂದಿ ಮತ್ತಿತರರು ಉಪಸ್ಥಿತರಿದ್ದರು. ವಿದ್ಯಾಧರ್ ಹೆಗ್ಡೆ ಸ್ವಾಗತಿಸಿದರು. ಅಮೃತಾ ಭಟ್ ಮತ್ತು ಶ್ರೀಶ ಕಾರ್ಯಕ್ರಮ ನಿರೂಪಿಸಿದರು. ಐಕ್ಯುಎಸಿ ಸಂಚಾಲಕಿ ಜ್ಯೋತಿ ಎಲ್.ಜೆ. ಪ್ರಾಸ್ತಾವಿಕವಾಗಿ ಮಾತನಾಡಿದರು. ಮಂಜುನಾಥ್ ವಂದಿಸಿದರು.

ವಿಜಯ ಕರ್ನಾಟಕ 28.11.18